**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿರವರ ನ್ಯಾಯಾಲಯ, ದೇವದುರ್ಗ.**

**ಸಿ.ಸಿ ನಂಬರ್ಃ 104/2018**

**ಪಿರ್ಯಾದಿ** ಃ **ಸರ್ಕಾರದ ಪರವಾಗಿ** ದೇವದುರ್ಗ **ಪೊಲೀಸರು,**
**ದೇವದುರ್ಗ ತಾಲ್ಲೂಕು.**

**ವಿರುದ್ದ**

**ಆರೋಪಿ** ಃ 2. ಸುರೇಶ ತಂದೆ ತಿಪ್ಪಣ್ಣ, 19 ವರ್ಷ,
ವಾಸ – ಮಲ್ಕಂದಿನ್ನಿ
ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ.

**ದೋಷಾರೋಪಣೆ**

**ರಫೀಕ್ ಅಹ್ಮದ್ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ದೇವದುರ್ಗ, ಆದ ನಾನು ಈ ಕೆಳಗಿನ ದೋಷಾರೋಪಣೆಯನ್ನು ನಿಮ್ಮ ಮೇಲೆ ಹೊರಿಸುವುದೇನೆಂ ದರೆ,**

ದಿನಾಂಕ 05.01.2017 ರಂದು ಸಂಜೆ 05.30 ಗಂಟೆಯ ಸಮಯದಲ್ಲಿ ಕೊತ್ತದೊಡ್ಡಿ ಗ್ರಾಮದ ಪಿರ್ಯಾದಿಯ ಹೊಲದಲ್ಲಿ ಸಾಕ್ಷಿ 4 ರವರ ಕುರಿಗಳು ಆರೋಪಿತರ ಹೊಲದಲ್ಲಿನ ಸಜ್ಜೆ ಹೊಲದಲ್ಲಿ ಹೋಗಿದ್ದ ವಿಷಯದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ಜಗಳ ಮಾಡುವ ಸಮಾನ ಉದ್ದೇಶದಿಂದ ಬಂದು, ಸಾಕ್ಷಿ 4 ರವರೊಂದಿಗೆ ಜಗಳ ತೆಗೆದು ಎಲೇ ಸೂಳೆ ಮಗನೇ ನಮ್ಮ ಸಜ್ಜೆ ಹೊಲದಲ್ಲಿ ಕುರಿಮರಿಗಳನ್ನು ಮೇಸ್ತಿಯೇನಲೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ನೆಮ್ಮದಿಗೆ ಭಂಗವನ್ನು ಉಂಟು ಮಾಡಿರುತ್ತೀರಿ, ಆ ಮೇರೆಗೆ **ನಿಮ್ಮ ಮೇಲೆ ಭಾ ದಂ ಸಂ ಕಲಂ** 504 ಸಹಕಲಂ 34 **ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.**

2. ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ 1 ನೇ ಆರೋಪಿತನಾದ ನೀನು ಹಲ್ಲೆ ಮಾಡುವ ಸಮಾನ ಉದ್ದೇಶದಿಂದ ಬಂದು ಸಾಕ್ಷಿ-4 ರವರ ಎಡಗೈ ಮೇಲೆ ಹಲ್ಲಿನಿಂದ ಕಚ್ಚಿ ಅಲ್ಲಿಯೇ ಬಿದ್ದಿದ್ದ ಕಲ್ಲನ್ನು ತೆಗೆದುಕೊಂಡು ತಲೆಯ ಮೇಲೆ ಹೊಡೆದು ಸಾದಾ ಸ್ವರೂಪದ ರಕ್ತಗಾಯವನ್ನುಂಟು ಮಾಡಿರುತ್ತೀರಿ, ಆ ಮೇರೆಗೆ **ನಿಮ್ಮ ಮೇಲೆ ಭಾ ದಂ ಸಂ ಕಲಂ** 324 ಸಹಕಲಂ 34 **ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.**

3. ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ 2 ನೇ ಆರೋಪಿತನಾದ ನೀನು ಹಲ್ಲೆ ಮಾಡುವ ಸಮಾನ ಉದ್ದೇಶದಿಂದ ಬಂದು ಸಾಕ್ಷಿ-4 ರವರಿಗೆ ಕೈಯಿಂದ ಮೈಕೈಗೆ ಹೊಡೆದು ನೋವನ್ನುಂಟು ಮಾಡಿರುತ್ತೀರಿ, ಆ ಮೇರೆಗೆ ನಿಮ್ಮ ಮೇಲೆ ಭಾ ದಂ ಸಂ ಕಲಂ 323 ಸಹಕಲಂ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.

4. ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ಸಾಕ್ಷಿ-1 ಮತ್ತು 4 ರವರಿಗೆ ನೀವು ಇಬ್ಬರೂ ನಮ್ಮನ್ನು ಎದರು ಹಾಕಿಕೊಂಡು ಹೇಗೆ ಜೀವನ ಮಾಡುತ್ತೀರಿ, ನಿಮ್ಮಬ್ಬರನ್ನು ಜೀವ ಸಹಿತ ಬಿಡುವುದಿಲ್ಲಾ ಅಂತಾ ಕೊಲೆ ಬೆದರಿಕೆ ಹಾಕಿದ್ದು, ಆ ಮೂಲಕ ನಿಮ್ಮ ಮೇಲೆ ಭಾ ದಂ ಸಂ ಕಲಂ 506 ಸಹಕಲಂ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.

ಮೇಲ್ಕಂಡ ಎಲ್ಲಾ ಆರೋಪಗಳು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುತ್ತವೆ.

ಪ್ರಶ್ನೆ ಃ ಮೇಲ್ಕಂಡ ದೋಷಾರೋಪಣೆಯನ್ನು ಅರ್ಥ ಮಾಡಿಕೊಂಡಿರಾ?
ಉತ್ತರ ಃ
ಪ್ರಶ್ನೆ ಃ ಮೇಲ್ಕಂಡ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ?
ಉತ್ತರ ಃ
ಪ್ರಶ್ನೆ ಃ ಮೇಲ್ಕಂಡ ದೋಷಾರೋಪಣೆಯ ವಿಚಾರಣೆ ಆಗಬೇಕೆ?
ಉತ್ತರ ಃ

(ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ಕನ್ನಡದಲ್ಲಿ ಓದಿ ಹೇಳಿ ನಂತರ ಅವರು ನೀಡಿದ ಉತ್ತರವನ್ನು ಬರೆದುಕೊಂಡು ಸರಿಯಾಗಿದೆ ಎಂದು ಧೃಢೀಕರಿಸಿದೆ)

ದಿನಾಂಕ 22.06.2024
ಸ್ಥಳ ದೇವದುರ್ಗ

(ಶ್ರೀ ರಫೀಕ್ ಅಹ್ಮದ್ )
ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ದೇವದುರ್ಗ.

ಸಿಸಿ ನಂಬರ್‌ಃ 104/2018

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿರವರ ನ್ಯಾಯಾಲಯ, ದೇವದುರ್ಗ.**

**ಸಿ.ಸಿ ನಂಬರ್ಃ 104/2018**

**ಆರೋಪಿ ನಂ.1**

ಪ್ರಶ್ನೆ 1) ನಿನ್ನ ಮೇಲಿನ ದೋಷಾರೋಪಣೆಗಳು ಓದಿ, ತಿಳಿಸಿ ಹೇಳಿರುವುದು ನಿನಗೆ ತಿಳಿಯಿತೇ?
ಉತ್ತರಃ

ಪ್ರಶ್ನೆ 2) ನೀನು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗ ಬಯಸುವಿಯಾ?
ಉತ್ತರಃ

(ಈ ಮೂಲಕ ದೃಢೀಕರಿಸುವುದೇನೆಂದರೆ ಆರೋಪಿತನಿಗೆ ಮೇಲಿನ ಪ್ರಶ್ನೆಗಳನ್ನು ಓದಿ ಹೇಳಿ ತಿಳಿಸಿ ಸದರಿ ಪ್ರಶ್ನೆಗಳಿಗೆ ಆರೋಪಿತನು ಸ್ವತಃ ಕೊಟ್ಟ ಉತ್ತರಗಳನ್ನು ನನ್ನ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು)

ದಿನಾಂಕಃ 22-06-2024 ಪ್ರ.ದ.ನ್ಯಾ.ದಂ.ಗಳು, ದೇವದುರ್ಗ.
ಸ್ಥಳಃ ದೇವದುರ್ಗ

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿರವರ ನ್ಯಾಯಾಲಯ, ದೇವದುರ್ಗ.**

**ಸಿ.ಸಿ ನಂಬರ್ಃ 104/2018**

**ಆರೋಪಿ ನಂ.2**

ಪ್ರಶ್ನೆ 1) ನಿನ್ನ ಮೇಲಿನ ದೋಷಾರೋಪಣೆಗಳು ಓದಿ, ತಿಳಿಸಿ ಹೇಳಿರುವುದು ನಿನಗೆ ತಿಳಿಯಿತೇ?
ಉತ್ತರಃ

ಪ್ರಶ್ನೆ 2) ನೀನು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗ ಬಯಸುವಿಯಾ?
ಉತ್ತರಃ

(ಈ ಮೂಲಕ ದೃಢೀಕರಿಸುವುದೇನೆಂದರೆ ಆರೋಪಿತನಿಗೆ ಮೇಲಿನ ಪ್ರಶ್ನೆಗಳನ್ನು ಓದಿ ಹೇಳಿ ತಿಳಿಸಿ ಸದರಿ ಪ್ರಶ್ನೆಗಳಿಗೆ ಆರೋಪಿತನು ಸ್ವತಃ ಕೊಟ್ಟ ಉತ್ತರಗಳನ್ನು ನನ್ನ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು)

ದಿನಾಂಕಃ 22-06-2024 ಪ್ರ.ದ.ನ್ಯಾ.ದಂ.ಗಳು, ದೇವದುರ್ಗ.
ಸ್ಥಳಃ ದೇವದುರ್ಗ